ವಿಲಾಸಿನಿಯ ಮಾತಿನ ಶೈಲಿ ಬಹಳಷ್ಟು ಬದಲಾಗಿತ್ತು.

'ಸ್ಫೋಟಕ ಏಂತದ್ದು ಅದರಲ್ಲಿ. ಚಾರುದತ್ತರು ಅಪಾನವಾಯು ಬಿಟ್ಟದ್ದಾ?'

ಅವಳನ್ನು ನಗಿಸಲು ನೋಡಿದ್ದೆ. ಅವಳು ಬದಲಾಗಿದ್ದಳು.

'ನಿನಗೇನು ಗೊತ್ತು ಲೋಕದ ವಿಷಯ. ನೀನೊಬ್ಬ ವಿದೂಷಕ' ಎನ್ನುವ ಹಾಗಿತ್ತು ಅವಳ ಮಾತಿನ ರೀತಿ.

'ಚಾರುದತ್ತರ ತಾಯಿಯ ಅಕಾಲ ಮೃತ್ಯು, ಅವರ ಮಡದಿಯ ಸಾವಿನ ವಿಷಯ, ಅವರ ಸೊಸೆಯ ಸಂಕಟಗಳು, ಅವರ ಮಗನ ಕಾಣೆಯಾಗುವಿಕೆ ಎಲ್ಲವೂ 'ರಕ್ತಚಂದನ'ಲ್ಲಿ ಸಾಕ್ಷ್ಯಚಿತ್ರದ ಹಾಗೆ ಅನಾವರಣಗೊಳ್ಳಲಿವೆ. ಇದು ಬರೀ ಚಾರುದತ್ತರ ಬದುಕಿನ ಅನಾವರಣ ಮಾತ್ರ ಅಲ್ಲ, ಮಲೆನಾಡಿನ ಸ್ತ್ರೀಬದುಕಿನ ಅಸಹಾಯಕತೆಯ ನಿರೂಪಣೆ.'

ವಿಲಾಸಿನಿ ಪುಸ್ತಕದ ಮುನ್ನುಡಿಯ ಹಾಗೆ ಮಾತನಾಡುತ್ತಿದ್ದಳು.

'ಇದಕ್ಕೆಲ್ಲ ಒತ್ತಾಸೆಯಾಗಿ ನಿಂತವರು ಸೌಭಾಗ್ಯ. ಬರೆಯಲು ಹಿಂಜರಿಯುತ್ತಿದ್ದ ನನ್ನಲ್ಲಿ ಕೆಚ್ಚು ತುಂಬಿದವರು. ಸತ್ಯ ಹೊರಬರಬೇಕು ಎಂದು ಹಟತೊಟ್ಟವರು ಅವರು. ಜೊತೆಗೆ ನನ್ನ ಪತಿ ಶೇಷಪ್ಪ. ಎಲ್ಲ ಪುರುಷರೂ ಜೀವವಿರೋಧಿಗಳಾಗಿರುವುದಿಲ್ಲ ಅನ್ನುವುದಕ್ಕೆ ಉದಾಹರಣೆ ಅವರು.'

ವಿಲಾಸಿನಿ ಪುಸ್ತಕದ ಕೃತಜ್ಞತೆಯ ಮಾತುಗಳ ಹಾಗೆ ನುಡಿಯುತ್ತಿದ್ದಳು

'ಅಯ್ಯೋ ಮಾರಾಯ್ತಿ ನಾನೂ ಒಂದು ಕಥೆ ಬರೆಯುತ್ತಿರುವೆ. ಅದರ ಕೊನೆಯ ಒಂದು ಚೂರು ಹೊಟ್ಟೆಯೊಳಗೆ ಸಿಕ್ಕಿಹಾಕಿಕೊಂಡಿದೆ. ಅದು ಹೊರಗೆ ಬರದೆ ನಾನು ಏನೂ ಮಾತನಾಡುವ ಪರಿಸ್ಥಿತಿಯಲ್ಲಿಲ್ಲ. ನಾನು ಮಾತನಾಡುವುದಿಲ್ಲ' ತಪ್ಪಿಸಿಕೊಳ್ಳಲು ನೋಡಿದೆ.

'ಹೌದಾ, ಸರಿ. ದಯವಿಟ್ಟು ನಾಳೆ ಬೆಳಗ್ಗೆ ಹತ್ತು ಗಂಟೆಗೆ ಫೇಸ್‌ಬುಕ್ಕು ಲೈವ್ ನೋಡಿ. ಪುರುಷಲೋಕದ ಎಲ್ಲ ಮುಖಗಳೂ ಅಲ್ಲಿ ಅನಾವರಣಗೊಳ್ಳಲಿವೆ. ಸಾಧ್ಯವಾದರೆ ನೋಡಿ.'

ವಿಲಾಸಿನಿ ರಪಕ್ಕಂತ ಮೊಬೈಲ್ ಕಟ್ ಮಾಡಿದಳು.

ನಾನು ಇನ್ನೆಂತಹ ಮಣ್ಣಾಂಗಟ್ಟಿ ಕಥೆ ಬರೆಯುವುದು. ಇನ್ನು ಎಲ್ಲ ಅವಳದೇ ವಿಜೃಂಭಿಸುವುದು.

ನಾನು ಒಂದು ಚೀಲ ಎತ್ತಿಕೊಂಡು ಮೀನು ತರಲು ಕಡಲಿನ ಕಡೆ ಹೊರಟೆ.

### ಅಬ್ದುಲ್ ರಶೀದ್

ಮೂಲತಃ ಕತೆಗಾರ ಮತ್ತು ಅಲೆಮಾರಿ. ಒಂದು ಕಾದಂಬರಿ, ಮೂರು ಕಥಾಸಂಕಲನಗಳು, ಎರಡು ಕವಿತಾ ಸಂಕಲನಗಳು, ನಾಲ್ಕು ಅಂಕಣ ಬರಹಗಳ ಸಂಕಲನ ಇವರ ಪ್ರಕಟಿತ ಕೃತಿಗಳು.

ರಶೀದ್, ಕೊಡಗಿನವರು. ಮೈಸೂರಿನ ಮಹಾರಾಜಾ ಕಾಲೇಜಿನಿಂದ ಪತ್ರಿಕೋದ್ಯಮ ಪದವಿ, ಮಾನಸಗಂಗೋತ್ರಿಯಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವೀಧರ. ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿರುವ ನಿಮಿತ್ತ ಮಂಗಳೂರು, ಮೇಘಾಲಯದ ರಾಜಧಾನಿ ಶಿಲ್ಲಾಂಗ್, ಕಲಬುರ್ಗಿ, ಮಡಿಕೇರಿ, ಮೈಸೂರು ಮತ್ತು ಇದೀಗ ಲಕ್ಷದ್ವೀಪದ ಕವರತ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕಳೆದ 12 ವರ್ಷಗಳಿಂದ ಪ್ರಕಟವಾಗುತ್ತಿರುವ 'ಕೆಂಡಸಂಪಿಗೆ' ಕನ್ನಡ ಅಂತರ್ಜಾಲ ಸಾಹಿತ್ಯ ಪತ್ರಿಕೆಯ ಸಂಪಾದಕ.